## ಕ್ಯಾನ್ಸರ್ ಪರೀಕ್ಷೆ ಸುಲಭ

ಪುರುಷರ ಜನನೇಂದ್ರಿಯ ಕ್ಯಾನ್ಸರ್ ಅನುವಂಶೀಯವಾಗಿ ಬರುವ ರೋಗ. ಅದರ ಸಾಧ್ಯತೆಯನ್ನು ರಕ್ತ ಅಥವಾ ಮೂತ್ರದ ಸರಳ ಪರೀಕ್ಷೆಯ ಮೂಲಕ ಕಂಡುಹಿಡಿಯಬಹುದು ಎಂದು ನ್ಯೂಯಾರ್ಕ್ ಸಂಶೋಧಕರು ಹೇಳಿದ್ದಾರೆ.

ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಸಂಶೋಧಕರು ಅನುವಂಶೀಯ ಕಾಯಿಲೆಗಳಲ್ಲಿ ಜನನೇಂದ್ರೀಯ ಕ್ಯಾನ್ಸರ್ ಕೂಡ ಒಂದು. ಹಾಗೆಂದು ಎಲ್ಲರಿಗೂ ಬರುತ್ತದೆ ಎಂದು ಹೇಳಲಾಗದು. ಯಾರಿಗೆ ಬರುತ್ತದೆ ಎಂದೂ ಊಹಿಸಲೂ ಆಗದು. ಅನುವಂಶೀಯ ಲಕ್ಷಣ ಇರುವವರು ಅದರ ಸಾಧ್ಯತೆಯನ್ನು ತಿಳಿದುಕೊಳ್ಳಲು ಸರಳ ಪರೀಕ್ಷೆಯೊಂದನ್ನು ಈಗ ಸಂಶೋಧಕರು ಅಭಿವೃದ್ಧಿಪಡಿಸಿದ್ದಾರೆ. ಆರಂಭದಲ್ಲಿಯೇ ಅದರ ಭೀತಿಯನ್ನು ದೂರಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎನ್ನುವುದು ಸಂಶೋಧಕರ ವಾದ.

## ವ್ಯಾಯಾಮ ಮಧುಮೇಹ ನಿಯಂತ್ರಕ

ಮಧುಮೇಹ ಎಂದು ಎದೆಗುಂದಿ ಮತ್ತಷ್ಟು ಆರೋಗ್ಯವನ್ನು ಹದಗಡಿಸಿಕೊಳ್ಳಬೇಕಿಲ್ಲ. ಮಧುಮೇಹಿಗಳು ದೇಹ ದಂಡಿಸುವ ಮೂಲಕ ಅದನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಬಹುದು ಎಂಬ ವಿಶ್ವಾಸವನ್ನು ನ್ಯೂಯಾರ್ಕ್ ಸಂಶೋಧಕರು ವ್ಯಕ್ತಪಡಿಸಿದ್ದಾರೆ.

ಸೊಂಟದ ಸುತ್ತಳತೆ, ಕೊಬ್ಬನ್ನು ಕರಗಿಸುವ ನಿಟ್ಟಿನಲ್ಲಿ ವ್ಯಾಯಾಮವನ್ನು ಮಾಡಿದರೆ ಕೊಬ್ಬು ಕರಗುತ್ತದೆ. ಅದರಿಂದ ಸಹಜವಾಗಿ ಮಧುಮೇಹವನ್ನೂ ತಹಬಂದಿಗೆ ತಂದುಕೊಳ್ಳಬಹುದು. ಇದರಿಂದ ಹೃದಯಕ್ಕೆ ಆಮ್ಲಜನಕವೂ ಧಾರಾಳವಾಗಿ ಸಿಗುತ್ತದೆ ಎನ್ನುವುದು ಸಂಶೋಧಕರ ವಾದ.

ತಜ್ಞರು ದೀರ್ಘಕಾಲದಿಂದ ಮಧುಮೇಹವನ್ನು ಎದುರಿಸುವ ವ್ಯಕ್ತಿಗಳನ್ನು ಕೇಂದ್ರೀಕರಿಸಿ ಅಧ್ಯಯನ ನಡೆಸಿದ್ದರು. ದೇಹ ದಂಡಿಸುತ್ತಾ ತೂಕವನ್ನು ನಿಯಂತ್ರಣಕ್ಕೆ ತೆಗೆದುಕೊಂಡರೆ ಮಧುಮೇಹವೂ ನಿಯಂತ್ರಣಕ್ಕೆ ಬಂದಿರುವುದನ್ನು ಗುರುತಿಸಿದ್ದಾಗಿ ಅವರು ಹೇಳಿಕೊಂಡಿದ್ದಾರೆ.

## ಅತಿಸಾರ ತಡೆಗೆ ಗೆಣಸು

ಕಿತ್ತಳೆ ಹಾಗೂ ಗೆಣಸಿನಲ್ಲಿ 'ಎ' ಜೀವಸತ್ವ ಹೆಚ್ಚಿನ ಪ್ರಮಾಣದಲ್ಲಿ ಇದೆ. ಇದು ಮಕ್ಕಳಲ್ಲಿ ಉಂಟಾಗುವ ಅತಿಸಾರ ಭೇದಿಯನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ ಎಂದು ವಾಷಿಂಗ್ಟನ್ ಸಂಶೋಧಕರು ನಡೆಸಿದ ಸಂಶೋಧನೆಯಿಂದ ದೃಢಪಟ್ಟಿದೆ.

ಜೀವಸತ್ವ ಎ ಜೀವಕೋಶಗಳಿಗೆ ರಕ್ಷಾ ಕವಚವಾಗುವ ಜೊತೆಗೆ ಅವುಗಳನ್ನು ಶಕ್ತಿಶಾಲಿಯನ್ನಾಗಿ ಮಾಡುತ್ತದೆ. ಇದರಿಂದ ರೋಗ ನಿರೋಧಕ ಶಕ್ತಿ ವೃದ್ಧಿಯಾಗುತ್ತದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

5 ವರ್ಷದ ಕೆಳಗಿರುವ ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅತಿಸಾರ ಭೇದಿಯನ್ನು ಪ್ರತಿಶತ 52ರಷ್ಟು ಪ್ರಮಾಣದಲ್ಲಿ ಕಿತ್ತಳೆ ಹಾಗೂ ಗೆಣಸು ಬಳಸುವುದರಿಂದ ತಡೆಯಬಹುದು ಎಂದು ತಜ್ಞರು ಹೇಳಿದ್ದಾರೆ.

## ಮಕ್ಕಳಲ್ಲಿ ಹೋಲಿಕೆ ಬೇಡ

ಓದು ಬರಹಕ್ಕೆ ಸಂಬಂಧಪಟ್ಟಂತೆ ಪೋಷಕರು ತಮ್ಮ ಮಕ್ಕಳನ್ನು ಒಬ್ಬರ ಜೊತೆ ಮತ್ತೊಬ್ಬರನ್ನು ಹೋಲಿಕೆ ಮಾಡುವುದು ಒಳ್ಳೆಯದಲ್ಲ ಎಂಬ ಎಚ್ಚರಿಕೆಯನ್ನು ವಾಷಿಂಗ್ಟನ್‌ನ ಸಂಶೋಧಕರು ನೀಡಿದ್ದಾರೆ.

ಪೋಷಕರು ಸಹೋದರರರಲ್ಲಿಯೇ ಹೋಲಿಕೆ ಮಾಡಿ ಸಾಧನೆಯ ಮೌಲ್ಯಮಾಪನ ಮಾಡುತ್ತಾರೆ. ಇದರಿಂದ ಶೈಕ್ಷಣಿಕ ಸಾಧನೆಗೆ ಮಾದರಿಯಾಗಲಿ ಎನ್ನುವುದು ಪೋಷಕರು ಯೋಚನೆ. ಒಂದು ಮಗುವಿಗಿಂತ ಮತ್ತೊಂದು ಮಗು ಬೇರೆಯೇ ಆಗಿರುವುದರಿಂದ ಈ ರೀತಿಯ ಹೋಲಿಕೆ ಕೂಡದು. ಇದರಿಂದ ಮಗುವಿಗೆ ಲಾಭಕ್ಕಿಂತ ಹಾನಿಯಾಗುವ ಸಾಧ್ಯತೆ ಹೆಚ್ಚು. ಎಲ್ಲಾ ಮಕ್ಕಳು ಒಂದೇ ರೀತಿ ಇರಲು ಸಾಧ್ಯವಿಲ್ಲ ಅವರ ಬುದ್ಧಿಮತ್ತೆಯಲ್ಲಿ ವ್ಯತ್ಯಾಸ ಇರುವುದು ನಿಸರ್ಗ ನಿಯಮ. ಈ ವಿಷಯದಲ್ಲಿ ಪೋಷಕರು ಎಚ್ಚರಿಕೆಯಿಂದ ವರ್ತಿಸಬೇಕು ಎಂದು ಸಂಶೋಧಕರು ಸೂಚಿಸಿದ್ದಾರೆ.

-ಟಿಪ್ಸ್




ನಿಮ್ಮ ನಂಬಿಕೆಯನ್ನು ಸಂತಸವಾಗಿ ಪರಿವರ್ತಿಸಿಕೊಳ್ಳಿ

1991 ರಿಂದ ಸಂತಾನೋತ್ಪತ್ತಿಯ ಸೇವೆಯಲ್ಲಿ

ಲಭ್ಯವಿರುವ ಸೇವೆಗಳು:

- ನಮ್ಮಲ್ಲಿ ಐ.ವಿ.ಎಫ್. ಚಿಕಿತ್ಸೆಯು ಅತೀ ಕಡಿಮೆ ವೆಚ್ಚದಲ್ಲಿ ದೊರೆಯುವುದು. (ಬಂಜೆತನದಿಂದ ಹೆರಿಗೆಯವರೆಗೆ)
- ಐಯುಐ, ಐವಿಎಫ್–ಐಸಿಎಸ್ಐ (ಆರ್ಟ್), ಅಸಿಸ್ಟೆಡ್ ಎಂಬ್ರೊ ಹ್ಯಾಚಿಂಗ್, ವೀರ್ಯ, ಅಂಡಾಣು, ಪಿಂಡಾಣುದಾನ, ಫ್ರೀಜಿಂಗ್, ಬಾಡಿಗೆ ತಾಯಿ, ಪಿಜಿಡಿ, ಪಿಸಿಓಎಸ್, ರಿಪ್ರೊಡಕ್ಟೀವ್ ಸರ್ಜರಿ, ಲ್ಯಾಬ್‌ಡೈಗ್ನೋಸಿಸ್, ಡಿಲೆವರಿ (ನಾರ್ಮಲ್ ಮತ್ತು ಎಲ್ಎಸ್‌ಸಿಎಸ್), ಅಲ್ಟರನೆಟ್ ಥೆರಪಿ.

Since 1991

ಡಾ.ರಮಾಸ್
ಟೆಸ್ಟ್‌ಟ್ಯೂಬ್ ಬೇಬಿ ಸೆಂಟರ್

ಕೃಷ್ಣ ದೇವಸ್ಥಾನ ರಸ್ತೆ, ಐಸಿಐಸಿಐ ಬ್ಯಾಂಕ್ ಎದುರುಗಡೆ (ಸಿಎಮ್‌ಹೆಚ್ ರಸ್ತೆ), ಇಂದಿರಾನಗರ 1ನೇ ಹಂತ, ಬೆಂಗಳೂರು–5600383.
ಮೊ.: 07022986300, 07022986306

ಟೋಲ್ ಫ್ರೀ ಸಂಖ್ಯೆ: 022 61816191

ಶೇಖರ್ ಕಾಂಪ್ಲೆಕ್ಸ್, ಹನುಮಾನ ಚಿತ್ರಮಂದಿರ ಎದುರುಗಡೆ, ಗಾಜಗಾರ ಪೇಟೆ, ರಾಯಚೂರು.
ಫೋ : 08532-240052, ಮೊ : 7259024741
ramafertilitryraichur@gmail.com / ramafertilitryraichur@yahoo.com

ಬೆಂಗಳೂರು | ಮಸ್ಕತ್ | ಹೈದ್ರಾಬಾದ | ರಾಯಚೂರು | ವಿಶಾಖಪಟ್ಟಣಂ | ಗುಂಟೂರು | ವಿಜಯವಾಡಾ | ರಾಜಮಂಡ್ರಿ